ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೊನ್ನಾಳಿ.

ಸಿ.ಸಿ. ನಂ. 1915/2019

ಪಿರ್ಯಾದುದಾರರು : ಹೊನ್ನಾಳಿ ಪೋಲಿಸ್ ಠಾಣೆ

ವಿರುದ್ಧ

ಆರೋಪಿ : 1. ಕರಿಬಸಪ್ಪ ಕೆ ಜಿ ಬಿನ್ ಕೊಟ್ರಪ್ಪ, 53 ವರ್ಷ
ವಾಸಃ ಹೊಳೆಸಿರಿಗೆರೆ ಗ್ರಾಮ
ಹರಿಹರ ತಾಲ್ಲೂಕು.

2. ಕೊಟ್ರೇಶ್ ಕೆ ಜಿ **{Plead guilty}**

ಭಾ. ದಂ. ಪ್ರ. ಸಂ. ಕಲಂ. **313** ರನ್ವಯ ಆರೋಪಿಯ ಹೇಳಿಕೆ

ಪ್ರಶ್ನೆ 1: ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರ :

ಪ್ರಶ್ನೆ 2:ಪ್ರಾಸಾ.1 ಚಂದ್ರಪ್ಪ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಈಗ್ಗೆ ಸುಮಾರು 5 ವರ್ಷಗಳ ಹಿಂದೆ ತನ್ನ ತಮ್ಮ ನಾಗರಾಜ ಹೊನ್ನಾಳಿಯಿಂದ ಅರಕೆರೆ ಕಾಲೋನಿಗೆ ಸ್ಕೂಟಿಯಲ್ಲಿ ಬರುತ್ತಿದ್ದಾಗ ನರಸಗೊಂಡನಹಳ್ಳಿಯ ಬಸ್ ನಿಲ್ದಾಣದ ಬಳಿ ಹೊಳೆಸಿರಿಗೇರೆ ಗ್ರಾಮದ ಒಬ್ಬ ವ್ಯಕ್ತಿಯು ಒಂದು ಮೋಟಾರ್ ಸೈಕಲ್ ನಲ್ಲಿ ಹಿಂದುಗಡೆಯಿಂದ ಬಂದು ಡಿಕ್ಕಿಪಡಿಸಿದ ವಿಚಾರವನ್ನು ಚಾಸಾ-16 ರವರು ತನಗೆ ಖುದ್ದಾಗಿ ಅಪಘಾತದ ಬಗ್ಗೆ ತಿಳಿಸಿದ್ದು, ತನ್ನ ತಮ್ಮನನ್ನು ಚಿಕಿತ್ಸೆಗಾಗಿ ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಚಾಸಾ-13 ಮತ್ತು 14 ರವರು ಕರೆದುಕೊಂಡು ಬಂದಿದ್ದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ :

ಪ್ರಶ್ನೆ 3:ಪ್ರಾಸಾ.1 ರವರು ಮುಂದುವರೆದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ತನ್ನ ಮಗ ಮಂಜ ಮತ್ತು ಹಾಲಪ್ಪರವರು ಗಾಯಾಳು ನಾಗರಾಜನನ್ನು ಮಂಗಳೂರಿನ ಯಾನೆಪೋಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದು ಸುಮಾರು 2 ತಿಂಗಳ ಕಾಲ ಚಿಕಿತ್ಸೆಯನ್ನು ಕೊಡಿಸಿ ಮನೆಗೆ ಕರೆದುಕೊಂಡು ಬಂದಿದ್ದು, ನಂತರ ಮನೆಯಲ್ಲಿ 1 ತಿಂಗಳ ಕಾಲ ಅಪಘಾತದಿಂದಾದ ಗಾಯಗಳಿಂದ ನರಳಿ ಮೃತಗೊಂಡ ಬಗ್ಗೆ ತಾನು ಪೊಲೀಸರಿಗೆ ದೂರನ್ನು ಕೊಟ್ಟ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ :

ಪ್ರಶ್ನೆ 4:ಪ್ರಾಸಾ.2 ಜಿ ಎಂ ರಾಜಪ್ಪ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ 2019 ನೇ ಸಾಲಿನಲ್ಲಿ ನಾನು ಮತ್ತು ಚಾಸಾ-9 ರವರು ನಮ್ಮ ಬೈಕ್ ನಲ್ಲಿ ಹೊನ್ನಾಳಿಗೆ ಬರುತ್ತಿದ್ದಾಗ ಪೊಲೀಸರು ಪೊಲೀಸ್ ಠಾಣೆಯ ಮುಂಭಾಗ ಬೈಕ್ ಅನ್ನು ನಿಲ್ಲಿಸಿ ನನಗೆ ಮತ್ತು ಚಾಸಾ-9 ರವರಿಗೆ ನೋಟೀಸನ್ನು ಜಾರಿ ಮಾಡಿ ಅಪಘಾತಕ್ಕೀಡಾದ ಮೋಟಾರ್ ಸೈಕಲ್ ಅನ್ನು ಅಮಾನತ್ತು ಪಡಿಸಿಕೊಳ್ಳಲು ಸಹಕರಿಸಿ ಎಂದು ಕೇಳಿಕೊಂಡಿದ್ದು ಆ ಮೇರೆಗೆ ತಾನು ಮತ್ತು ಚಾಸಾ-9 ರವರು ಒಪ್ಪಿಕೊಂಡಿದ್ದು ಆ ಮೇರೆಗೆ ತನ್ನ, ಚಾಸಾ-1 ಮತ್ತು 9 ರವರ ಸಮಕ್ಷಮ ದಿಃ 25-09-2019 ರಂದು ಸಂಜೆ 04-30 ರಿಂದ 05-15 ಗಂಟೆ ಸಮಯದಲ್ಲಿ ಇಂಜಿನ್ ನಂ.OG3AG2513241, ಚಾಸ್ಸಿ ನಂ.MD626BG33G2A20921 ನೀಲಿ ಬಣ್ಣದ ಸ್ಕೂಟರ್ ಅನ್ನು ಅಮಾನತ್ತು ಪಡಿಸಿಕೊಂಡು ಮಹಜರ್ ಕ್ರಮ ಜರುಗಿಸಿ, ವಾಹನವನ್ನು ಅಮಾನತ್ತುಪಡಿಸಿಕೊಂಡು, ಛಾಯಾಚಿತ್ರಗಳನ್ನು ತೆಗೆದ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ :

ಪ್ರಶ್ನೆ 5:ಪ್ರಾಸಾ.7 ತಿಪ್ಪೇಸ್ವಾಮಿ ಟಿ ಎನ್ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 25-09-2019 ರಂದು ಪ್ರಕರಣದ ಕಡತವನ್ನು ಚಾಸಾ-22 ರವರಿಂದ ಸ್ವೀಕರಿಸಿ, ಅಲ್ಲಿಯವರೆಗೂ ಆದ ತನಿಖೆಯನ್ನು ಪರಿಶೀಲಿಸಿ, ತನಿಖೆಯನ್ನು ಮುಂದುವರೆಸಿ, ನಂತರ ಚಾಸಾ-1 ರವರನ್ನು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿ, ನಮ್ಮ ಠಾಣೆಯ ಸಿಬ್ಬಂದಿಯಾದ ಮಲೇಶಪ್ಪ ರವರ ಮುಖಾಂತರ ಪಂಚರಾದ ಚಾಸಾ-9 ಮತ್ತು 10 ರವರನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ

ನೋಟೀಸ್ ಜಾರಿ ಮಾಡಿ ನಂತರ ಚಾಸಾ-1, 9 ಮತ್ತು 10 ರವರ ಸಮಕ್ಷಮ ನೋಂದಣಿ ಸಂಖ್ಯೆ ಇಲ್ಲದ ತಿಳಿ ನೀಲಿ ಬಣ್ಣದ ಸ್ಕೂಟಿ ಮೋಟಾರ್ ಸೈಕಲ್ ಇಂಜಿನ್ ನಂ. ಒಜಿಎಜಿ2513241 ಮತ್ತು ಚಾರ್ಸಿ ನಂಬರ್ ಎಂಡಿ626 ಬಿಜಿ33 ಜಿ2 ಎ 20921 ಅಮಾನತ್ತು ಪಡಿಸಿಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ ?

ಉತ್ತರ :

ಪ್ರಶ್ನೆ6:ಪ್ರಾಸಾ.7 ರವರು ಮುಂದುವರೆದು ಅಮಾನತ್ತು ಮಹಜರ್ ಕ್ರಮ ಜರುಗಿಸಿ, ಛಾಯಾಚಿತ್ರಗಳನ್ನು ತೆಗೆದು ನಂತರ ಸದರಿ ವಾಹನವನುನ ಮಾಲು ಪಟ್ಟಿಯಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡು ಮತ್ತು ಚಾಸಾ-9 ಮತ್ತು 10 ರವರ ಹೇಳಿಕೆ ಮತ್ತು ಮುಚ್ಚಳಿಕೆ ಪತ್ರಗಳನ್ನು ಪಡೆದು ದಿಃ 26-09-2019 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ಗಾಯಳು ನಾಗರಾಜಪ್ಪರವರು ಮೃತಪಟ್ಟ ಬಗ್ಗೆ ಮುಂದುವರೆದ ದೂರನ್ನು ನೀಡಿದ್ದು, ಸದರಿ ದೂರಿನ ಆಧಾರದ ಮೇಲೆ ನ್ಯಾಯಾಲಯಕ್ಕೆ ಕಲಂ 304(ಎ) ಐಪಿಸಿಯನ್ನು ಹೆಚ್ಚುವರಿಯಲ್ಲಿ ಅಳವಡಿಸಿಕೊಳ್ಳಲು ಮನವಿಯನ್ನು ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ ?

ಉತ್ತರ :

ಪ್ರಶ್ನೆ 7:ಪ್ರಾಸಾ.7 ರವರು ಮುಂದುವರೆದು ನಂತರ ಮೃತ ನಾಗರಾಜರವರ ಶವ ಕಾವಲು ಮಾಡಲು ಚಾಸಾ-21 ರವರನ್ನು ನೇಮಕ ಮಾಡಿ ಸದರಿ ಪ್ರಕರಣವು ಘೋರ ಪ್ರಕರಣವಾಗಿದ್ದರಿಂದ ಪ್ರಕರಣವನ್ನು ಚಾಸಾ-24 ರವರಿಗೆ ಹಸ್ತಾಂತರಿಸಿದ್ದು, ಆದರೆ ಚಾಸಾ-24 ರವರು ಬೇರೊಂದು ಕರ್ತವ್ಯದಲ್ಲಿ ನಿರತರಾಗಿದ್ದರಿಂದ ಅವರ ಸೂಚನೆಯ ಮೇರೆಗೆ ಮೃತನ ಶವ ಪರೀಕ್ಷೆಗೆ ಚಾಸಾ-20 ರವರನ್ನು ನೇಮಕ ಮಾಡಿ ಕಳುಹಿಸಿಕೊಟ್ಟು ದಿಃ 12-10-2019 ರಂದು ಈ ಪ್ರಕರಣದ ಕಡತವನ್ನು ಚಾಸಾ-24 ರವರಿಗೆ ಹಸ್ತಾಂತರಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ ?

ಉತ್ತರ :

ಪ್ರಶ್ನೆ8:ಪ್ರಾಸಾ.8 ದೇವರಾಜ್ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 12-

10-2019 ರಂದು ಈ ಪ್ರಕರಣದ ಕಡತವನ್ನು ಚಾಸಾ-23 ರವರಿಂದ ಪಡೆದುಕೊಂಡು ಅಲ್ಲಿಯವರೆಗೂ ಆದ ತನಿಖೆಯನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿ, ಚಾಸಾ-1, 11 ರಿಂದ 16 ರವರ ಮರುಹೇಳಿಕೆಯನ್ನು ಮತ್ತು ಚಾಸಾ-16 ರವರಿಂದ ಮುಚ್ಚಳಿಕೆ ಪತ್ರವನ್ನು ಪಡೆದು ಚಾಸಾ-21 ರವರಿಂದ 65 ಬಿ ಪ್ರಮಾಣ ಪತ್ರವನ್ನು ಪಡೆದು ದಿಃ 19-10-2019 ರಂದು ಚಾಸಾ-18 ರವರಿಂದ ಮೃತನ ಪಿ ಎಂ ವರದಿಯನ್ನು ಪಡೆದ ನಂತರ ತನಿಖೆಯಿಂದ ಆರೋಪಿಯ ವಿರುದ್ಧ ಆರೋಪ ಸಾಭೀತಾಗಿದ್ದರಿಂದ, ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ :

ಪ್ರಶ್ನೆ 9:ಪ್ರಾಸಾ. 9 ರಾಮಪ್ಪ ಎ ಕೆ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿದಿಃ 29-05-2019 ರಂದು 10-30 ರಿಂದ 11-30 ಗಂಟೆ ಸಮಯದಲ್ಲಿ ಸ್ಥಳ ಮಹಜರನ್ನು ಜರುಗಿಸಿದ್ದು ನಂತರ ಹೊನ್ನಾಳಿ ಪೊಲೀಸ್ ಠಾಣೆಯ ಆವರಣದಲ್ಲಿ ತನ್ನ, ಚಾಸಾ-1 ಮತ್ತು 7 ರವರ ಸಮಕ್ಷಮ ಬೆಳಗ್ಗೆ 09-30 ರಿಂದ 10-30 ಗಂಟೆ ಸಮಯದಲ್ಲಿ ಅಮಾನತ್ತು ಮಹಜರ್ ಕ್ರಮ ಜರುಗಿಸಿ ಕೆಎ-17/ಇವೈ-2153 ಮೋಟಾರ್ ಸೈಕಲ್ ಮತ್ತು ಟಿ ವಿ ಎಸ್ ಪೆಪ್ಟ್ ಸ್ಕೂಟಿಯನ್ನು ಅಮಾನತ್ತು ಪಡಿಸಿಕೊಂಡು ಅಮಾನತ್ತು ಮಹಜರ್ ಕ್ರಮ ಜರುಗಿಸಿ, ಛಾಯಾಚಿತ್ರಗಳನ್ನು ತೆಗೆದು ಮಹಜರ್ ಸಮಯದಲ್ಲಿ ಪೊಲೀಸರಿಂದ ನೋಟೀಸನ್ನು ಪಡೆದುಕೊಂಡ ಬಗ್ಗೆ ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆಯನ್ನು ಕೊಟ್ಟ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ :

ಪ್ರಶ್ನೆ 10 : ನೀವು ಹೇಳುವುದು ಏನಾದರೂ ಇದೆಯೇ ?

ಉತ್ತರ : ಆ-1

ಪ್ರಶ್ನೆ 11: ನಿಮ್ಮ ಪರ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಳ್ಳುವಿರಾ ?

ಉತ್ತರ : ಅ-1

ಸಾಕ್ಷಿ ವಿಚಾರಣೆಯಲ್ಲಿ ಕಂಡು ಬಂದ ಅಂಶಗಳ ಸಂಕ್ಷಿಪ್ತ ವಿವರಗಳನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಹೇಳಿದಂತೆ ಉತ್ತರಗಳನ್ನು ಬರೆದುಕೊಳ್ಳಲಾಯಿತು ಎಂದು ದೃಢೀಕರಿಸುತ್ತೇನೆ .

ಸ್ಥಳ : ಹೊನ್ನಾಳಿ
ದಿನಾಂಕ :07.03.2026.

(ದೇವದಾಸ್ ಹೆಚ್.)
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹೊನ್ನಾಳಿ.

Case called out, accused No.1 and 2 are present and the counsel for accused No.2 has filed an application under Sec.437(A) of Cr.P.C. Heard and perused the application and same is hereby

allowed. Accused No.2 is directed to execute bond of Rs.20,000/- with one surety for like sum.

The Accused No.2 offer surety.

Surety by name Manjunatha S.V S/o Veerappa S, 49 years, R/o: 2nd cross, Kallahalli, Vinobanagara, Shimoga town and taluk, is present and offers himself stand as surety to accused No.2. He filed surety affidavit, declaration along with RTC extract bearing Sy.No. 148/6 measuring to an extent of 20 guntas acre 28.08 guntas and notarized copy of Aadhaar card .

Enquired the surety. Surety held sufficient. Hence, accepted. Office to take bond.

Accused No.3 is absent. Issue NBW to Accused No.3 and compliance of Accused No.1 ,3 and 313 statement by: 25.03.2026.

PCJ.,Honnali